ಕ್ರ.ಸಂ.	ತಾಲ್ಲೂಕುಗಳ ಹೆಸರು		ಯೋಜನೆಗೆ ವೆಚ್ಚ ಮಾಡಿರುವ ಹಣದ ವಿವರ (ರೂ. ಕೋಟಿಗಳಲ್ಲಿ)
		2011–11	2011–12
1	ಔರಾದ್	2.44	5.33
2	ಭಾಲ್ಕಿ	–	9.23
3	ಬಸವಕಲ್ಯಾಣ	–	2.50
4	ಹುಮ್ನಾಬಾದ್	–	2.50
	ಒಟ್ಟು	2.44	19.56

ಬೀದರ್ ಜಿಲ್ಲೆಯ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ನಿವಾರಿಸಲು ಕೃಷಿಯೇತರ ವಿದ್ಯುತ್ ಗ್ರಾಹಕರಿಗೆ ನಿರಂತರ ವಿದ್ಯುತ್‌ನ್ನು ಪೂರೈಸಲು "ನಿರಂತರ ಜ್ಯೋತಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದಕ್ಕಾಗಿ ಪ್ರಸ್ತುತ ಸಾಲಿನಲ್ಲಿ 10.95 ಕೋಟಿಗಳನ್ನು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ವೆಚ್ಚ ಮಾಡಲಿದೆ.
ಸಂಖ್ಯೆ : ಇಎನ್ 121 ಪಿಪಿಎಂ 2012

(ಶೋಭಾ ಕರಂದ್ಲಾಜೆ)
ಇಂಧನ ಸಚಿವರು

ಕರ್ನಾಟಕ ವಿಧಾನ ಸಭೆ

278

ಶ್ರೀ ರಾಜಶೇಖರ್ ಬಸವರಾಜ್ ಪಾಟೀಲ್

ಅ) N.E.K.R.T.C. ಬೀದರ್ ವಿಭಾಗದಲ್ಲಿ ETM ಹಗರಣದ ತನಿಖೆಯ ಬಗ್ಗೆ ಮುಖ್ಯ ಮಂತ್ರಿಯವರು ದಿ. 15.09.2010 ರಲ್ಲಿ ಪತ್ರ ಸಂಖ್ಯೆ CM /44159 ಪ್ರಧಾನ ಕಾರ್ಯದರ್ಶಿಯವರು ಸಾರಿಗೆ ಇಲಾಖೆಗೆ ಆದೇಶ ಮಾಡಿದ್ದು, ಆದರೆ ಇಲಾಖೆಯವರು ಯಾವುದೇ ಪ್ರತಿಕ್ರಿಯೆ ನೀಡದೆ, ಈ ಹಗರಣವನ್ನು ಬಚ್ಚಿಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಖ್ಯ ಮಂತ್ರಯವರ ಆದೇಶವನ್ನು ಪಾಲನೆ ಮಾಡದೆ, ಎರಡು ವರ್ಷಗಳಿಂದ ಈ ವಿಷಯದಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗ

ಮಾಡಿರುವ ಅಧಿಕಾರಿಗಳಾದ ಗುಲ್ಬರ್ಗಾ ಕೇಂದ್ರಿಯ ಕಛೇರಿ ಯವರ ಮೇಲೆ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ದಿನಾಂಕ : 9.08.2010 ರಂದ ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿರುವ ಮನವಿಯ ವಿಷಯ ಹಾಗೂ ದಿನಾಂಕ : 16.9.2010 ರ ಟಿಪ್ಪಣಿ ಸಂ. CM/44159/ಎಂಎಲ್‌ಸಿ/2010ರ ವಿಷಯ ಒಂದೇ ಆಗಿದ್ದು, ಈ ಟಿಪ್ಪಣಿ ಇಲಾಖೆಗೆ ಬರುವುದಕ್ಕಿಂತ ಮೊದಲೇ ದಿನಾಂಕ : 9–8–2010ರ ಮನವಿ ಮೇಲೆ ಕ್ರಮ ವಹಿಸಲಾಗಿದೆ.

ಆ) ಸಂಸ್ಥೆಯಲ್ಲಿ ತ್ರೀ–ಕೋಡ್ ದುರ್ಬಳಕೆ ಮಾಡಿಕೊಂಡು ಸಾರಿಗೆ ಆದಾಯ ವಂಚನೆ ಮಾಡಿರುವ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಹುಮನಾಬಾದ್ ಘಟಕದ ಒಟ್ಟು 12 ಜನ ನಿರ್ವಾಹಕರುಗಳನ್ನು ವಜಾ ಮಾಡಲಾಗಿದೆ. ಅಲ್ಲದೇ ಸದರಿ ಘಟಕದ ಇಬ್ಬರು ಕಿರಿಯ ಸಹಾಯಕರುಗಳನ್ನು ಈಗಾಗಲೇ ಸಂಸ್ಥೆಯ ಸೇವೆಯಿಂದ ವಜಾಗೊಳಿಸಲಾಗಿರುತ್ತದೆ ಮತ್ತು ಲೆಕ್ಕ ಪತ್ರ ಮೇಲ್ವಿಚಾರಕರ ಮೇಲೆ ಕ್ರಮ ಜರುಗಿಸಲಾಗಿದೆ. ಅಂದಿನ ಘಟಕ ವ್ಯವಸ್ಥಾಪಕರವರನ್ನು ಇಲಾಖಾ ವಿಚಾರಣೆಗೆ ಒಳಪಡಿಸಿದ್ದು, ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಬಂದ ನಂತರ ಮುಂದಿನ ಶಿಸ್ತಿನ ಕ್ರಮ ಜರುಗಿಸಲಾಗುವುದು. ಅಲ್ಲದೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ವೆಸಗಿರುವ ಇನ್ನಿತರ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದ್ದು, ಅವರುಗಳ ವಿರುದ್ಧ ದಾಖಲಾದ ಪ್ರಕರಣಗಳು ಪ್ರಸ್ತುತ ಪ್ರಗತಿ ಹಂತದಲ್ಲಿರುತ್ತವೆ.

ಸಾರಿಇ 69 ಸಾಸಂಪ್ರ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ

ಕರ್ನಾಟಕ ವಿಧಾನ ಸಭೆ

278

ಶ್ರೀ ರಾಜಶೇಖರ್ ಬಸವರಾಜ್ ಪಾಟೀಲ್

ಅ) N.E.K.R.T.C. ಬೀದರ್ ವಿಭಾಗದಲ್ಲಿ ETM ಹಗರಣದ ತನಿಖೆಯ ಬಗ್ಗೆ ಮುಖ್ಯ ಮಂತ್ರಿಯವರು ದಿ. 15.09.2010 ರಲ್ಲಿ ಪತ್ರ ಸಂಖ್ಯೆ CM /44159 ಪ್ರಧಾನ ಕಾರ್ಯದರ್ಶಿಯವರು ಸಾರಿಗೆ ಇಲಾಖೆಗೆ ಆದೇಶ ಮಾಡಿದ್ದು, ಆದರೆ ಇಲಾಖೆಯವರು ಯಾವುದೇ ಪ್ರತಿಕ್ರಿಯೆ ನೀಡದೆ, ಈ ಹಗರಣವನ್ನು ಬಚ್ಚಿಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಖ್ಯ ಮಂತ್ರಯವರ ಆದೇಶವನ್ನು ಪಾಲನೆ ಮಾಡದೆ, ಎರಡು ವರ್ಷಗಳಿಂದ ಈ ವಿಷಯದಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗ ಮಾಡಿರುವ ಅಧಿಕಾರಿಗಳಾದ ಗುಲ್ಬರ್ಗಾ ಕೇಂದ್ರಿಯ ಕಛೇರಿ ಯವರ ಮೇಲೆ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ದಿನಾಂಕ : 9.08.2010 ರಂದ ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿರುವ ಮನವಿಯ ವಿಷಯ ಹಾಗೂ ದಿನಾಂಕ : 16.9.2010 ರ ಟಿಪ್ಪಣಿ ಸಂ. CM/44159/ಎಂಎಲ್‌ಸಿ/2010ರ ವಿಷಯ ಒಂದೇ ಆಗಿದ್ದು, ಈ ಟಿಪ್ಪಣಿ ಇಲಾಖೆಗೆ ಬರುವುದಕ್ಕಿಂತ ಮೊದಲೇ ದಿನಾಂಕ : 9–8–2010ರ ಮನವಿ ಮೇಲೆ ಕ್ರಮ ವಹಿಸಲಾಗಿದೆ.

ಆ) ಸಂಸ್ಥೆಯಲ್ಲಿ ತ್ರೀ–ಕೋಡ್ ದುರ್ಬಳಕೆ ಮಾಡಿಕೊಂಡು ಸಾರಿಗೆ ಆದಾಯ ವಂಚನೆ ಮಾಡಿರುವ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಹುಮನಾಬಾದ್ ಘಟಕದ ಒಟ್ಟು 12 ಜನ ನಿರ್ವಾಹಕರುಗಳನ್ನು ವಜಾ ಮಾಡಲಾಗಿದೆ. ಅಲ್ಲದೇ ಸದರಿ ಘಟಕದ ಇಬ್ಬರು ಕಿರಿಯ ಸಹಾಯಕರುಗಳನ್ನು ಈಗಾಗಲೇ ಸಂಸ್ಥೆಯ ಸೇವೆಯಿಂದ ವಜಾಗೊಳಿಸಲಾಗಿರುತ್ತದೆ ಮತ್ತು ಲೆಕ್ಕ ಪತ್ರ ಮೇಲ್ವಿಚಾರಕರ ಮೇಲೆ ಕ್ರಮ ಜರುಗಿಸಲಾಗಿದೆ. ಅಂದಿನ ಘಟಕ ವ್ಯವಸ್ಥಾಪಕರವರನ್ನು ಇಲಾಖಾ ವಿಚಾರಣೆಗೆ ಒಳಪಡಿಸಿದ್ದು, ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಬಂದ ನಂತರ ಮುಂದಿನ ಶಿಸ್ತಿನ ಕ್ರಮ ಜರುಗಿಸಲಾಗುವುದು. ಅಲ್ಲದೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ವೆಸಗಿರುವ ಇನ್ನಿತರ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಕೈಗೊಳ್ಳಲಾಗಿದ್ದು, ಅವರುಗಳ ವಿರುದ್ಧ ದಾಖಲಾದ ಪ್ರಕರಣಗಳು ಪ್ರಸ್ತುತ ಪ್ರಗತಿ ಹಂತದಲ್ಲಿರುತ್ತವೆ.

ಸಾರಿಇ 69 ಸಾಸಂಪ್ರ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ

ಹುಣಸೂರು ತಾಲ್ಲೂಕಿಗೆ ಬಿಡುಗಡೆಗೊಂಡ ಅನುದಾನದ ಬಗ್ಗೆ
434

ಶ್ರೀ ಮಂಜುನಾಥ್ ಹೆಚ್.ಪಿ

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2008–09ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮಂಜೂರಾದ ಅನುದಾನವೆಷ್ಟು;

ಆ) ಸದರಿ ಅನುದಾನದ ಪೈಕಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಮಂಜೂರಾದ ಹಣವೆಷ್ಟು ಸದರಿ ಹಣವನ್ನು ಆರ್ಥಿಕ ಹಾಗೂ ಭೌತಿಕವಾಗಿ ಪೂರ್ಣ ವಿನಿಯೋಗಿಸಲಾಗಿದೆಯೇ; (ವಿವರಣೆ ನೀಡುವುದು)

ಇ) ಹುಣಸೂರು ತಾಲ್ಲೂಕಿನಲ್ಲಿ ಇರುವ ಹರಿಜನ ಹಾಗೂ ಗಿರಿಜನ ಕಾಲೋನಿ / ಗ್ರಾಮಗಳೆಷ್ಟು, ಮೇಲ್ಕಂಡ ಅನುದಾನಗಳಿಂದ ಎಷ್ಟು ಹರಿಜನ ಹಾಗೂ ಗಿರಿಜನ ಕಾಲೋನಿ ಉಪಯೋಗವಾಗಿದೆ. (ಗ್ರಾಮವಾರು ವಿವರ ನೀಡುವುದು)

ಈ) ಸಮರ್ಪಕ ಅನುಷ್ಠಾನವಾಗಿದ್ದಲ್ಲಿ ಸದರಿ ಅನುದಾನಗಳ ವೆಚ್ಚಗಳಿಂದ ಹರಿಜನ ಹಾಗೂ ಗಿರಿಜನ ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯವಂತ ಬದುಕು ಉತ್ತಮಗೊಂಡಿರುವುದರ ಬಗ್ಗೆ ಸರ್ಕಾರದ ವತಿಯಿಂದ ಸಮೀಕ್ಷೆ ಅಥವಾ ಸರ್ವೆ ಕಾರ್ಯ ಮಾಡಲಾಗಿರುವುದೇ?

ಹುಣಸೂರು ತಾಲ್ಲೂಕಿಗೆ ಬಿಡುಗಡೆಗೊಂಡ ಅನುದಾನದ ಬಗ್ಗೆ

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮಂಜೂರಾದ ಅನುದಾನದ ವಿವರ ಅನುಬಂಧ –1 ರಲಲಿ ಒದಗಿಸಲಾಗಿದೆ.